# ಭಾರತದ ಸಾಂಸ್ಕೃತಿಕ ರಾಯಭಾರಿ



■ ಪ್ರವೀಣ ಕುಲಕರ್ಣಿ

‘ಭಾರತವೆಂದರೆ ಬದುಕಿನ ಅಸಂಖ್ಯ ಬಣ್ಣಗಳು, ಅನನ್ಯ ಸಂಸ್ಕೃತಿಗಳು ಮತ್ತು ತರಹೇವಾರಿ ತಿಂಡಿಗಳು!’

ಆಸ್ಟ್ರೇಲಿಯಾದ ಜಗದ್ವಿಖ್ಯಾತ ಷೆಫ್ ಗ್ಯಾರಿ ಮೆಹಿಗನ್ ಅವರು ಭಾರತವನ್ನು ಒಂದೇ ವಾಕ್ಯದಲ್ಲಿ ಬಣ್ಣಿಸುವ ರೀತಿ ಇದು. ಗ್ಯಾರಿ ಅವರನ್ನು ನಾವೀಗ ‘ಭಾರತದ ಸಾಂಸ್ಕೃತಿಕ ರಾಯಭಾರಿ’ ಎಂದು ಕರೆಯಬಹುದೇನೋ. ಭಾರತವನ್ನು ಅತ್ಯಂತ ಉತ್ಕಟವಾಗಿ ಪ್ರೀತಿಸುವ ಈ ಬಾಣಸಿಗ, ಇಲ್ಲಿನ ಸಂಸ್ಕೃತಿಯನ್ನು ಹುಡುಕಿಕೊಂಡು, ಇಲ್ಲಿನ ಆಹಾರವನ್ನು ಹುಡುಕಿಕೊಂಡು ಒಂದಲ್ಲ, ಎರಡಲ್ಲ, 14 ಬಾರಿ ದಂಡೆತ್ತಿ ಬಂದಿದ್ದಾರೆ. ವರ್ಷದುದ್ದಕ್ಕೂ ಚಾಚಿಕೊಂಡಿರುವ ಭಾರತದ ಮೆಗಾ ಫೆಸ್ಟಿವಲ್‌ಗಳಲ್ಲಿ ಪಾಲ್ಗೊಂಡು, ಅಲ್ಲಿನ ಸಂಸ್ಕೃತಿಗೆ ಬೆರಗಾಗಿದ್ದಾರೆ. ತಿಂಡಿ ತಿನಿಸುಗಳಿಗೆ ಮಾರುಹೋಗಿದ್ದಾರೆ. ಜಗತ್ತಿನಲ್ಲಿ ಭಾರತದಂತಹ ವಿಶಿಷ್ಟ ದೇಶ ಮತ್ತೊಂದಿಲ್ಲ ಎಂದು ಸಾರಿ ಸಾರಿ ಹೇಳುತ್ತಿದ್ದಾರೆ. ಭಾರತೀಯ ಹಬ್ಬಗಳು ಮತ್ತು ಸಂಸ್ಕೃತಿಗಳ ಕುರಿತ ಅವರ ಶೋಧಗಳು ನ್ಯಾಷನಲ್ ಜಿಯಾಗ್ರಫಿಕ್ ಚಾನಲ್‌ನಲ್ಲಿ ಡಾಕ್ಯುಮೆಂಟರಿಗಳಾಗಿ ಪ್ರದರ್ಶನಗೊಂಡಿವೆ.

ಕೇರಳದ ಓಣಂ ಹಬ್ಬದಲ್ಲಿ ಕೇರಳಿಗನೇ ಆಗಿ ಪಾಲ್ಗೊಂಡಿದ್ದ ಅವರು, ಹಿನ್ನೀರಿನಲ್ಲಿ ನಡೆಯುವ ದೋಣಿ ಸ್ಪರ್ಧೆಯನ್ನು ವೀಕ್ಷಿಸುತ್ತಾ ತೀರದುದ್ದಕ್ಕೂ ಮಕ್ಕಳಂತೆ ಓಡಾಡಿದ್ದಾರೆ. ಅಲ್ಲಿನ ಹೆಂಗಳೆಯರ ಜೊತೆ ಕುಳಿತು ದೊಡ್ಡ ರಂಗೋಲಿಯನ್ನೂ ಬಿಡಿಸಿದ್ದಾರೆ. ಚಂಡೆ ಬಾರಿಸುತ್ತಾ ಕಲಾವಿದರ ಜೊತೆ ಕುಣಿದಿದ್ದಾರೆ. ಯಾವುದೇ ಮನೆ, ಹೋಟೆಲ್ ಇಲ್ಲವೆ ದೇವಸ್ಥಾನಕ್ಕೆ ಹೋದರೂ ಮೊದಲು ಅಲ್ಲಿನ ಪಾಕಶಾಲೆಯನ್ನು ಹುಡುಕಿಕೊಂಡು ಹೋಗುವ ಅವರು, ಒಲೆಯಲ್ಲಿ ಕೊತ ಕೊತ ಕುದಿಯುವ ಪಾಕವೈವಿಧ್ಯಕ್ಕೆ ಫಿದಾ ಆಗಿದ್ದಾರೆ. ಪಾಯಸವನ್ನು ಎಷ್ಟು ಆನಂದದಿಂದ ಅವರು ಚಪ್ಪರಿಸುವರೋ ಅಷ್ಟೇ ಆನಂದದಿಂದ ಬೆಂಕಿಯುಗುಳುವ ಹಣ್ಣು ಮೆಣಸಿನಕಾಯಿಯ ಕೆಂಪು ನೀರನ್ನೂ ಕುಡಿದಿದ್ದಾರೆ.

ವೃಂದಾವನದ ಹೋಳಿ ಜಗತ್ಪ್ರಸಿದ್ಧ. ಇಲ್ಲಿ ವಿಧವೆಯರೂ ಬಣ್ಣದೋಕುಳಿ ಆಡುತ್ತಾರೆ. ಆಧುನಿಕ ‘ರಾಧೆ’ಯರು ಇಲ್ಲಿ ತಮ್ಮ ಕೃಷ್ಣನಿಗೆ ಲಾಠಿಯಿಂದ ಬಾರಿಸುತ್ತಾರೆ. ಮಥುರಾ–ವೃಂದಾವನದ ತಿಂಡಿಗಳೆಂದರೆ ಬಾಯಲ್ಲಿ ನೀರೂರುತ್ತದೆ. ಇಂತಹ ವೃಂದಾವನವನ್ನೂ ಗ್ಯಾರಿ ಹುಡುಕಿಕೊಂಡು ಹೋಗಿದ್ದಿದೆ. ಪಿಚಕಾರಿ ಮತ್ತು ಬಣ್ಣ ಖರೀದಿಸಿ, ಸ್ಥಳೀಯರೊಂದಿಗೆ ಬೆರೆತು ಬಣ್ಣ ಆಡಿದ್ದಿದೆ. ವೃಂದಾವನದಲ್ಲಿ ಕುರ್ಚಿಯಲ್ಲಿ ಸುತ್ತುತ್ತಾ ಮೇಲಿನಿಂದ ಮಾರು ದೂರದ ಕೆಳಲೋಟಕ್ಕೆ ಬಿಸಿಹಾಲು ಸುರಿಯುವ ಸ್ಥಳೀಯ ಅಂಗಡಿಕಾರನ ಪ್ರತಿಭೆಗೆ ಅವರು ಸಲಾಂ ಹೇಳಿದ್ದಾರೆ. ಕೋಲ್ಕತ್ತಾದ ದುರ್ಗಾಪೂಜೆಯಲ್ಲೂ ಗ್ಯಾರಿ ಪಾಲ್ಗೊಳ್ಳುವ ಅವಕಾಶವನ್ನು ಬಿಟ್ಟುಕೊಟ್ಟಿಲ್ಲ. ಅಲ್ಲಿ ಮೂರ್ತಿ ತಯಾರಕರಿಂದ ಹಿಡಿದು, ಪ್ರತಿಷ್ಠಾಪನೆ ಮಾಡಿ ಪೂಜೆಮಾಡುವ ಅರ್ಚಕರವರೆಗೆ ಎಲ್ಲರನ್ನೂ ಮಾತನಾಡಿಸಿದ್ದಾರೆ, ಎಲ್ಲರ ಮನೆಗೂ ಹೋಗಿ ಬಂದಿದ್ದಾರೆ. ಲಕ್ಷಾಂತರ ಸಂಖ್ಯೆಯಲ್ಲಿ ಜನ ಸೇರುವ ದುರ್ಗಾಪೂಜೆಗಳನ್ನು ಕಂಡು ದಂಗಾಗಿದ್ದಾರೆ. ಅಲ್ಲಿನ ಸ್ಥಳೀಯರ ಜೊತೆ ಸೇರಿ ನಾಲಗೆಯನ್ನು ಮಡಿಚಿ ‘ಉಲುಲುಲುಲುಲೊ’ ಎಂದು ಹೇಳುತ್ತಾ, ದೇವಿಯ ಮೂರ್ತಿಗೆ ಆರತಿ ಎತ್ತಿದ್ದಾರೆ.

ನಾನೊಬ್ಬ ಸದಾ ಪ್ರವಾಸ ಮಾಡುವ ತಿಂಡಿಪೋತ ಎಂದು ತಮ್ಮನ್ನು ತಾವು ಕರೆದುಕೊಳ್ಳುವ ಗ್ಯಾರಿ, ಹಾರ್ನ್‌ಬಿಲ್ ಉತ್ಸವದಲ್ಲಿ ಪಾಲ್ಗೊಳ್ಳಲು ನಾಗಾಲ್ಯಾಂಡ್‌ಗೂ ಹೋಗಿ ಬಂದಿದ್ದಾರೆ. ಅಲ್ಲಿನ ಬುಡಕಟ್ಟು ಜನಾಂಗದವರ ಸಾಹಸ ಕ್ರೀಡೆಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದ್ದಾರೆ. ಬುಡಕಟ್ಟು ಜನಾಂಗದವರು ಕಾಡಿನಿಂದ ಆಯ್ದು ತರುವ ಬಗೆಬಗೆಯ ಹುಳು–ಜಂತುಗಳ ಖಾದ್ಯವನ್ನು ಸವಿದು, ಬಾಯಿ ಚಪ್ಪರಿಸಿದ್ದಾರೆ. ಹಾಕುವ ಮಸಾಲೆಯ ಒಂದೊಂದು ಸಣ್ಣ ತುಣುಕನ್ನೂ ನೋಡಿ, ಒಲೆಯ ಮೇಲಿನಿಂದ ಅದು ಹೊರಸೂಸುವ ವಾಸನೆಯನ್ನು ಆಘ್ರಾಣಿಸುತ್ತಾ, ಜಿಹ್ವಾರಸ ನುಂಗುತ್ತಾ, ಆಹಾರ ರೆಡಿ ಆಗುವುದನ್ನೇ ಕಾಯುತ್ತಾ ಕುಳಿತಿದ್ದಾರೆ. ಅಲ್ಲಿನವರ ಬೀಜರಕ್ಷಣೆಯ ವಿಶಿಷ್ಟ ಸಂಸ್ಕೃತಿಯನ್ನು ಕಂಡು ನಮ್ಮಲ್ಲಿ ಇಂತಹ ಜ್ಞಾನವೇ ಇಲ್ಲವಲ್ಲ ಎಂದು ಹಲುಬಿದ್ದಾರೆ. ದೆಹಲಿಯ ಚಾಂದನಿ ಚೌಕದ ಸುತ್ತ ಈದ್ ಸಂದರ್ಭದಲ್ಲಿ ಓಡಾಡಿದ ಈ ಬಾಣಸಿಗ, ರಾತ್ರಿಯೆಲ್ಲ ಅಲ್ಲಿ ಸಿದ್ಧವಾಗುತ್ತಿದ್ದ ವಿಶಿಷ್ಟ ಈದ್ ತಿಂಡಿಗಳ ಸವಿಯನ್ನೂ ಉಂಡಿದ್ದಾರೆ. ಹಲಾಲ್ ತಾಣಗಳ ಒಳನುಗ್ಗಿ, ಅಲ್ಲಿನ ಬಾಣಸಿಗರ ಕೈಯೊಳಗಿನ ಸೌಟನ್ನು ಕೇಳಿ ಪಡೆದು, ತಪ್ಪೇಲಿಯಲ್ಲಿ ಕೊತ ಕೊತ ಕುದಿಯುತ್ತಿದ್ದ ಆಹಾರವನ್ನು ಆ ಸೌಟಿನಿಂದ ಆಡಿಸಿ ಖುಷಿಪಟ್ಟಿದ್ದಾರೆ.

ಗ್ಯಾರಿ, ಬೆಂಗಳೂರಿನ ಬೀದಿಯಲ್ಲೂ ಓಡಾಡಿ ಹೋಗಿದ್ದಾರೆ. ದೋಸೆಯ ಜನಕ ಕರ್ನಾಟಕವೇ ಎಂಬುದನ್ನು ಪತ್ತೆ ಹಚ್ಚಿರುವ ಅವರು, ದಿ ರಾಮೇಶ್ವರಂ ಕೆಫೆಯಲ್ಲಿ ಸವಿದ ದೋಸೆಯ ವಿಡಿಯೊವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹರಿಬಿಟ್ಟಿದ್ದಾರೆ. ಕೊನೆಗೂ ಒಂದು ಒಳ್ಳೆಯ ದೋಸೆಯನ್ನು ಸವಿದೆ ಎಂದು ಅಡಿಬರಹ ಬರೆದಿದ್ದಾರೆ. ಅಯ್ಯೋ, ಗ್ಯಾರಿ ಬೆಂಗಳೂರಿಗೆ ಬಂದು ಹೋದರೂ ಗೊತ್ತೇ ಆಗಲಿಲ್ಲ. ಹೋಗಿ ಕೈಕುಲುಕಿ ಬರಬಹುದಿತ್ತು ಎಂದು ಹಲುಬಿದವರು ಅದೆಷ್ಟು ಜನವೋ.

ದಿ ಕನಾಟ್ ಎಂಬುದು ಲಂಡನ್ನಿನ ಬಹುದೊಡ್ಡ ಹೋಟೆಲ್. ಅಲ್ಲಿ ಬಾಣಸಿಗರಾಗಿ ತರಬೇತಿ ಪಡೆದವರಿಗೆ ಜಗತ್ತಿನ ತುಂಬಾ ಬೇಡಿಕೆ. ಹಾಗೆ ತರಬೇತಿ ಪಡೆದವರಲ್ಲಿ ಗ್ಯಾರಿ ಕೂಡ ಒಬ್ಬರು. ಆಸ್ಟ್ರೇಲಿಯಾದ ಮಾಸ್ಟರ್‌ಷೆಫ್ ಸ್ಪರ್ಧೆಯ ತರಬೇತುದಾರರಲ್ಲಿ ಒಬ್ಬರಾಗಿ ಜನಮನ ಗೆದ್ದವರು. ಹಲವು ಹೋಟೆಲ್‌ಗಳನ್ನು ತೆರೆದವರು. 14 ಬಾರಿ ಬಂದು ಹೋಗಿದ್ದೀರಲ್ಲ? ಮತ್ತೆ ಭೇಟಿ ಇಲ್ಲ ತಾನೆ ಎಂದು ಪ್ರಶ್ನಿಸಿದರೆ, ‘ಭಾರತ ನನ್ನ ಎರಡನೇ ಮನೆ. ನಾನು ಇಲ್ಲಿಗೆ ಸದಾ ಬರುತ್ತಲೇ ಇರುತ್ತೇನೆ. ಮೊಗೆದಷ್ಟೂ ಮುಗಿಯದು ಇಲ್ಲಿನ ಸಂಸ್ಕೃತಿ, ಇಲ್ಲಿನ ಆಹಾರ’ ಎನ್ನುತ್ತಾರೆ. ಇಲ್ಲಿನ ಬದುಕಿನ ಬಣ್ಣಗಳಿಗೆ ಅದು ಎಷ್ಟೊಂದು ಶೇಡ್‌ಗಳು ಎಂದೊಮ್ಮೆ ಅವರ ಎಂದಿನ ಶೈಲಿಯ ವಿಶಿಷ್ಟ ಚಪ್ಪಾಳೆಯನ್ನು ತಟ್ಟುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65